ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಜಂ.ನಿ(ಆ) ಖಾಯಂ.ಪೂ.ಸೇ.ಘೋ01/2021-22. ದಿನಾಂಕ : 29-12-2022.

**ಜ್ಞಾಪನಾ**

ವಿಷಯ : : ರಾಜ್ಯದ ಎಲ್ಲಾ 'ಸಿ' ದರ್ಜೆಯ ನೌಕರರುಗಳಿಗೆ ಖಾಯಂಪೂರ್ವ ಸೇವಾವಧಿ ತೃಪ್ತಿಕರವೆಂದು ಘೋಷಿಸುವ ಪೂರ್ವದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿಯ ಲಿಖಿತ ಪರೀಕ್ಷೆಯನ್ನು ಆಯಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸುವ ಕುರಿತು.

ಉಲ್ಲೇಖ : ಈ ಕಛೇರಿಯ ಸಮಸಂಖ್ಯಾ ಪತ್ರ ದಿನಾಂಕ : 04-01-2022, 11/02/2022, 28-02-2022. ಮತ್ತು 16-12-2022.

-*-*-*-*-*-

ವಿಷಯಕ್ಕೆ ಸಂಬಂಧಿಸಿದಂತೆ ಆಯಾ ವಿಭಾಗೀಯ ಸಹ ನಿರ್ದೇಶಕರು ಸದರಿ ವಿಭಾಗದ ಕೇಂದ್ರ ಸ್ಥಳಗಳಲ್ಲಿಯೇ ಖಾಯಂಪೂರ್ವ ಸೇವಾವಧಿ ತೃಪ್ತಿಕರವೆಂದು ಘೋಷಣೆ ಬಾಕಿ ಇರುವ ನೌಕರರುಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುತ್ತಿರುವುದು ಕಂಡುಬಂದಿರುತ್ತದೆ. ಇದರಿಂದ ವಿವಿಧ ಜಿಲ್ಲೆಗಳಲ್ಲಿನ ಕಾರ್ಯಸ್ಥಳದಿಂದ ವಿಭಾಗ ಮಟ್ಟದ ಪರೀಕ್ಷಾ ಕೇಂದ್ರಕ್ಕೆ ಹಾಜರಾಗುವುದು ಅಭ್ಯರ್ಥಿಗಳಿಗೆ ಅನಾನುಕೂಲವಾಗುತ್ತಿದೆ.

ವಿಭಾಗ ಮಟ್ಟದಲ್ಲಿ ಪರೀಕ್ಷೆಯನ್ನು ಹಮ್ಮಿಕೊಳ್ಳುವ ಬದಲಿಗೆ ಆಯಾ ಜಿಲ್ಲಾ ಮಟ್ಟದಲ್ಲಿಯೇ ಪರೀಕ್ಷೆಯನ್ನು ಹಮ್ಮಿಕೊಳ್ಳುವುದರಿಂದ, ನೌಕರರುಗಳ ದೃಷ್ಟಿಯಿಂದ ಹೆಚ್ಚು ಅನುಕೂಲಕರ ಮತ್ತು ಪರಿಣಾಮಕಾರಿಯಾಗಿರುತ್ತದೆ.

ಪ್ರಯುಕ್ತ ಜಿಲ್ಲೆಗೆ ಸಂಬಂಧಪಟ್ಟ ಆಯಾ ಡಯಟ್ ಪ್ರಾಂಶುಪಾಲರು, ಡಯಟ್ ವತಿಯಿಂದಲೇ ಜಿಲ್ಲೆಯಲ್ಲಿರುವ ಎಲ್ಲಾ ಕಛೇರಿ ಹಾಗೂ ಕೇಂದ್ರ ಕಛೇರಿಗಳಲ್ಲಿ, ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಪೂರ್ವ ಸೇವಾವಧಿ ತೃಪ್ತಿಕರವೆಂದು ಘೋಷಿಸಲು ಬಾಕಿ ಇರುವ ನೌಕರರುಗಳಿಗೆ, ಪ್ರತಿ ಮಾಹೆಯಲ್ಲಿ ಲಿಖಿತ ಪರೀಕ್ಷೆಯನ್ನು ಉಪನಿರ್ದೇಶಕರು (ಆಡಳಿತ) ಇವರ ಸಹಯೋಗದೊಂದಿಗೆ, ಹಾಗೂ ವಿಭಾಗೀಯ ಸಹ ನಿರ್ದೇಶಕರ ಮಾರ್ಗದರ್ಶನದಲ್ಲಿ ಜಿಲ್ಲಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ನಡೆಸಲು ತಿಳಿಸಿದೆ. ಉಳಿದಂತೆ ಈ ಹಿಂದಿನ ಇತರೆ ಎಲ್ಲಾ ಸೂಚನೆಗಳು ಯಥಾವತ್ತಾಗಿ ಮುಂದುವರೆಯುವುದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ಡಾ.ರೂಪಶ್ರೀ. ಎಸ್. ಕ.ಆ.ಸೇ
ಜಂಟಿನಿರ್ದೇಶಕರು (ಆಡಳಿತ)

**ಗೆ,**

1. ನಿರ್ದೇಶಕರು(ಕಾರ್ಯಕ್ರಮ), ಸಮಗ್ರ ಶಿಕ್ಷಣ ಕರ್ನಾಟಕ/ ಅಪರ ಆಯುಕ್ತರ ಕಛೇರಿ, ಕಲ್ಬುರ್ಗಿ/ ಧಾರವಾಡ
2. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಅಭಿವೃದ್ಧಿ

**ಪ್ರತಿಯನ್ನು ಮಾಹಿತಿಗಾಗಿ**:

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ
3. ಮಾನ್ಯ ಆಯುಕ್ತರ ಆಪ್ತ ಶಾಖೆಗೆ.
4. ಜಂಟಿನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ
5. ಕಛೇರಿ ಪ್ರತಿ.